**ಕರ್ನಾಟಕ ಸರ್ಕಾರ**

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

DTE-ADMI0ACM2/15/2020

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:06-11-2020.

**-:: ಸು ತ್ತೋಲೆ::-**

**ವಿಷಯ:** 2020-21ನೇ ಸಾಲಿನ ಪ್ರಥಮ ಸೆಮಿಸ್ಟರ್ ಹಗೂ ತೃತೀಯ ಸೆಮಿಸ್ಟರ್ (ಲ್ಯಾಟರಲ್ ಎಂಟ್ರಿ) ಡಿಪ್ಲೋಮಾ ಪ್ರವೇಶ ಸಂಬಂಧ – **ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರವೇಶಾವಧಿಯನ್ನು ವಿಸ್ತರಿಸುವ ಬಗ್ಗೆ.**

**ಉಲ್ಲೇಖ:**

1. ಈ ಕಛೇರಿಯ ಪ್ರವೇಶಾಧಿಸೂಚನೆ ಪತ್ರ ಸಂ. DTE-ADMI0ACM2/15/2020, ದಿ:29-08-2020 (ಪ್ರಥಮ ಸೆಮಿಸ್ಟರ್) & ಈ ಕಛೇರಿ ಸುತ್ತೋಲೆ ಪತ್ರ ದಿ:03-10-2020 & 20-10-2020 & 06-11-2020.
2. ಈ ಕಛೇರಿಯ ಪ್ರವೇಶಾಧಿಸೂಚನೆ ಪತ್ರ ಸಂ. DTE-ADMI0ACM2/21/2020, ದಿ:20-10-2020 (ತೃತೀಯ ಸೆಮಿಸ್ಟರ್ ಲ್ಯಾಟರಲ್ ಎಂಟ್ರಿ) & ಈ ಕಛೇರಿ ಸುತ್ತೋಲೆ ಪತ್ರ ದಿ:20-10-2020
3. ಹಲವು ಖಾಸಗಿ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳ ಮನವಿಗಳು.

-0000000-

2020-21ನೇ ಸಾಲಿನ ಪ್ರಥಮ ಸೆಮಿಸ್ಟರ್ ಹಾಗೂ ತೃತೀಯ ಸೆಮಿಸ್ಟರ್ (ಲ್ಯಾಟರಲ್ ಎಂಟ್ರಿ) ಡಿಪ್ಲೋಮಾ ಪ್ರವೇಶ ಸಂಬಂಧ ರಾಜ್ಯದ ಎಲ್ಲಾ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿನ ಪ್ರವೇಶಕ್ಕೆ ಅಂತಿಮ ದಿನಾಂಕ:14-11-2020 ಎಂದು ಉಲ್ಲೇಖ(1) ರ ಈ ಕಛೇರಿ ಸುತ್ತೋಲೆಗಳಲ್ಲಿ ವಿಸ್ತರಿಸಲಾಗಿತ್ತು. ಉಲ್ಲೇಖ(5)ರ ಪತ್ರಗಳಲ್ಲಿ ಹಲವು ಪಾಲಿಟೆಕ್ನಿಕ್‌ಗಳಲ್ಲಿ ಇನ್ನೂ ಅನೇಕ ಸ್ಥಾನಗಳು ಖಾಲಿ ಇರುವುದಾಗಿ ಸಂಬಂಧಿಸಿದ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರು ಮಾಹಿತಿ ನೀಡಿ ಪ್ರವೇಶಾವಧಿಯನ್ನು ವಿಸ್ತರಿಸಬೇಕೆಂದು ಕೋರಿರುವುದನ್ನು ಒಟ್ಟಾರೆ ಸಂಸ್ಥೆಗಳ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪರಿಗಣಿಸಿ ಪ್ರಥಮ ಸೆಮಿಸ್ಟರ್ ಹಾಗೂ ತೃತೀಯ ಸೆಮಿಸ್ಟರ್(ಲ್ಯಾಟರಲ್ ಎಂಟ್ರಿ) **ಪ್ರವೇಶಾವಧಿಯನ್ನು ದಿ:30-11-2020 ರವರೆಗೆ ವಿಸ್ತರಿಸಲಾಗಿದೆ.**

ಪ್ರಯುಕ್ತ, ವಿಸ್ತರಿಸಲಾದ ಪ್ರವೇಶಾವಧಿಯನ್ನು **ಆಯಾ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರು ಗಮನದಲ್ಲಿರಿಸಿಕೊಂಡು ನಿಯಮಗಳ ಪ್ರಕಾರ ಪ್ರವೇಶವನ್ನು ಪೂರೈಸುವಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು** ತಿಳಿಸಲಾಗಿದೆ. ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಸರ್ಕಾರವು ಆಗಿಂದಾಗ್ಗೆ ಹೊರಡಿಸುವ ಮಾರ್ಗಸೂಚಿಗಳನ್ನು ಹಾಗೂ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ.

**ಪ್ರಥಮ ಸೆಮಿಸ್ಟರ್ ಹಾಗೂ ತೃತೀಯ ಸೆಮಿಸ್ಟರ್ (ಲ್ಯಾಟರಲ್ ಎಂಟ್ರಿ) ಡಿಪ್ಲೋಮಾ ಪ್ರವೇಶಾವಧಿಯನ್ನು ಪುನಃ ವಿಸ್ತರಿಸಲಾಗುವುದಿಲ್ಲ. ಪ್ರಯುಕ್ತ, ಇದನ್ನು ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರು ಗಮನದಲ್ಲಿರಿಸಿಕೊಂಡು ನಿಯಮಗಳ ಪ್ರಕಾರ ಪ್ರವೇಶವನ್ನು ಪೂರೈಸುವಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: http://dtek.karnataka.gov.in** ನ್ನು ನೋಡುವುದು.

**ಆಯುಕ್ತರು**

***ಇವರಿಗೆ,***

***ಎಲ್ಲಾ ಖಾಸಗಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರಿಗೆ – ಮಾಹಿತಿಗಾಗಿ ಮತ್ತು ಸೂಕ್ತ ಅನುಸರಣೆಗಾಗಿ***

**ಪ್ರತಿ ಇವರಿಗೆ ಮಾಹಿತಿಗಾಗಿ:**

1. ಆಯುಕ್ತರವರ ಆಪ್ತಶಾಖೆಗೆ.
2. ನಿರ್ದೇಶಕರವರ ಆಪ್ತಶಾಖೆಗೆ.
3. ಜಂಟಿ ನಿರ್ದೇಶಕರು(ಆಡಳಿತ) ಇವರ ಆಪ್ತಶಾಖೆಗೆ.
4. ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
5. ಸಾರ್ವಜನಿಕ ಸಂಪರ್ಕಾಧಿಕಾರಿ, ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
6. ಇ-ಗವರ್ನನ್ಸ್ ವಿಭಾಗಕ್ಕೆ – ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
7. ಇಆರ್‌ಎಸ್(3) & ಡಿವಿಪಿ(2) ವಿಭಾಗಕ್ಕೆ. 8.ಕಛೇರಿ ಪ್ರತಿ.